**<u>ಬಂಟ್ವಾಳ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ</u>**

**<u>ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>**

ಸಿಸಿ ನಂ. 1369/2022

ಫ್ರಾಸಾ : 01

ಚಾಸಾ : 01

| | | |
|---|---|---|
| ಹೆಸರು | : | ಗುರು ಮೂರ್ತಿ |
| ತಂದೆಯ ಹೆಸರು | : | ದಿ ನಾರಾಯಣ |
| ಪ್ರಾಯ | : | 36 ವರ್ಷ |
| ಉದ್ಯೋಗ | : | ಖಾಸಾಗಿ ಉದ್ಯೋಗಿ |
| ವಾಸಸ್ಥಳ | : | ಜೆ.ಪಿ. ನಗರ, ಮೈಸೂರು |

ದಿಃ **21.01.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

1. ಚಾಸಾ 2 ನನ್ನ ಭಾವ. ಚಾಸಾ 3 ರಿಂದ 5 ನನ್ನ ಸ್ನೇಹಿತರು. ಆರೋಪಿಯನ್ನು ನಾನು ನೋಡಿರುವುದಿಲ್ಲ. ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರು ಆಗಿದ್ದು, ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ನಿ.ಪಿ. 1 ಕ್ಕೆ ಎಲ್ಲಿ, ಯಾವಾಗ ಮತ್ತು ಯಾವ ಉದ್ದೇಶಕ್ಕೆ ಸಹಿ

ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ–1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರನ್ನಉ ಕೊಟ್ಟಿಲ್ಲ.

2. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಅಪಘಾತ ಸ್ಥಳದ ಮಹಜರು ಆಗಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಅಪಘಾತ ಸ್ಥಳದ ಕಚ್ಚಾ ನಕ್ಷೆ ಆಗಿದ್ದು, ಅದನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–2 ಮತ್ತು 3 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 2 ಮತ್ತು 3 ಕ್ಕೆ ಯಾವಾಗ ಮತ್ತು ಯಾವ ಉದ್ದೇಶಕ್ಕೆ ಸಹಿ ಮಾಡಿರುತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಜರುಗಿಸಿರುವುದಿಲ್ಲ ಹಾಗೂ ಕಚ್ಚಾ ನಕ್ಷೆ ತಯಾರಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ವಶಕ್ಕೆ ಪಡೆದಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೆ ಮರು ಹೇಳಿಕೆ ನೀಡಿರುವುದಿಲ್ಲ.

3. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಮೊಟಾರು ವಾಹನ ಕಾಯ್ದೆ ಕಲಂ 133 ರಡಿಯಲ್ಲಿ ನೀಡಿದ ನೋಟೀಸು ಆಗಿದ್ದು, ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ನಿ.ಪಿ. 4 ನೋಟಿಸಿಗೆ ನೀಡಿದ ಉತ್ತರ ಆಗಿದ್ದು, ಅದನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು

ನಿಪಿ–5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ 2 ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ನಷ್ಟ ಭರ್ತಿ ಮುಚ್ಚಳಿಕೆ ಪತ್ರ ಆಗಿದ್ದು, ಅದನ್ನು ನಿಪಿ–6 ಎಂದು, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ–6(ಎ) ಮತ್ತು 6(ಬಿ) ಎಂದು ಗುರುತಿಸಲಾಯಿತು. ನಿ.ಪಿ. 4 ರಿಂದ 6 ಕ್ಕೆ ಎಲ್ಲಿ, ಯಾವಾಗ ಮತ್ತು ಯಾವ ಉದ್ದೇಶಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ–4 ರಿಂದ 6 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಗೆ ಕೆಎ–51–ಎಂಡಿ–1684 ನೇ ಕಾರಿನ 3 ಬಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ. 7 ಎಂದು ಗುರುತಿಸಲಾಯಿತು. ನಿ.ಪಿ. 7 ಬಾವಚಿತ್ರಗಳಿಗೆ ಸಂಬಂದಿಸಿದಂತೆ ಒಂದು ಸಿಡಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕೆಎ–05–ಎಂಜಿ–0994 ನೇ 3 ಬಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿಯವರಿಂದಃ –**

4. ದಿನಾಂಕ 10.04.2022 ರಂದು ಮುಂಜಾನೆ 1.30 ರ ಸಮಯದಲ್ಲಿ ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಆರೋಪಿ ತನ್ನ ಬಾಬ್ತು ಕೆಎ–05–ಎಂಜಿ–0994 ನೇ ಕಾರನ್ನು ಬೆಂಗಳೂರು ಕಡೆಯಿಂದ ಮಂಗಳೂರು ಕಡೆಗೆ ದುಡುಕುತನ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಬಂಟ್ವಾಳ ತಾಲೂಕಿನ ಪೆರಾಜೆ ಗ್ರಾಮದ ಬುಡೋಳಿ ಎಂಬಲ್ಲಿಗೆ ತಲುಪಿದಾಗ ಎದುರಿನಿಂದ ಅಂದರೆ

ಮಂಗಳೂರು ಕಡೆಯಿಂದ ಮೈಸೂರು ಕಡೆಗೆ ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಕೆಎ-51-ಎಂಡಿ-1684 ನೇ ಕಾರಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅದರ ಪರಿಣಾಮ ನನ್ನ ಕಾರಿನಲ್ಲಿದ್ದ ಚಾಸಾ 2 ರವರ ಎಡ ಕಾಲಿನ ಮಂಡಿಗೆ ಮತ್ತು ಬೆನ್ನಿಗೆ ಗುದ್ದಿದ ಗಾಯಗಳಾಗಿದ್ದು, ಚಾಸಾ 3 ರವರ ತಲೆಗೆ ರಕ್ತ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಕೆಎ-05-ಎಂಜಿ-0994 ನೇ ಕಾರಿನ ಎಡಬದಿ ಕುಳಿತಿದ್ದ ಲಕ್ಷ್ಮಣ ಆಚಾರ್ಯ ರವರ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿ ಮೃತಪಡಲು ಆರೋಪಿ ಕಾರಣನಾಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಎರಡೂ ಕಾಲಿಗೆ ಸ್ವಲ್ಪ ರಕ್ತಗಾಯ ಹಾಗೂ ಚಾಸಾ 4 ಮತ್ತು 5 ರವರ ಕಾಲಿಗೆ ಗುದ್ದಿದ ಸಾಮಾನ್ಯ ಗಾಯ ಮತ್ತು ಆರೋಪಿಗೆ ತಲೆಗೆ ಮತ್ತು ಶರೀರದ ಇತರ ಭಾಗಗಳಿಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ.

5. ನಂತರ ನಾನು ವಿಟ್ಲ ಪೊಲೀಸ್ ಠಾಣೆಗೆ ಹೋಗಿ ನಿ.ಪಿ. 1 ರಂತೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಪೊಲೀಸರು ಅಪಘಾತ ಸ್ಥಳಕ್ಕೆ ಬಂದಾಗ ನಾನು ಹಾಜರಿದ್ದು ತೋರಿಸಿಕೊಟ್ಟಂತೆ ಅಪಘಾತ ಸ್ಥಳದ ಮಹಜರನ್ನು ಪಂಚರಾದ ಚಾಸಾ 10 ಮತ್ತು 11 ರವರ ಸಮಕ್ಷಮ ಸಮಯ ಮದ್ಯಾಹ್ನ 3 ಗಂಟೆಯಿಂದ 4.30 ರವರೆಗೆ ನಿ.ಪಿ. 2 ರಂತೆ ಜರುಗಿಸಿ ನಿ.ಪಿ. 3 ರಂತೆ ಅಪಘಾತ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಮಹಜರು ಸಂದರ್ಬದಲ್ಲಿ ಅಪಘಾತಕ್ಕೆ ಒಳಗಾದ ಕೆಎ-51-ಎಂಡಿ-1684 ಮತ್ತು ಕೆಎ-05-ಎಂಜಿ-0994 ನೇ ಕಾರುಗಳನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ನಾನು ಪೊಲೀಸರ ಮುಂದೆ ದಿನಾಂಕ 10.04.2022 ರಂದು ನಾನು ವಿಟ್ಲ ಪೊಲೀಸ್ ಠಾಣೆಗೆ ಬಂದು ..........................................................................................................................................................................ಈ ದಿನ ವಿಟ್ಲ ಅಪಘಾತ ಸ್ಥಳದ ಪರಿಶೀಲನೆಯ ಬಗ್ಗೆ ಸ್ಥಳಕ್ಕೆ ಬಂದಾಗ ಅಪಘಾತ ಸ್ಥಳವನ್ನು ಪೊಲೀಸರಿಗೆ

ತೋರಿಸಿಕೊಟ್ಟು ಅವರು ತಯಾರಿಸಿದ ಮಹಜರ್ ಗೆ ಸಹಿ ಮಾಡಿರುತ್ತೇನೆ ಹಾಗೂ ಉಳಿದೆಲ್ಲ ವಿಷಯಗಳು ನಾನು ಮೊದಲು ಈ ದಿನ ಬೆಳಿಗ್ಗೆ ನೀಡಿದ ಪಿರ್ಯಾದಿಯಂತೆಯೇ ಆಗಿರುತ್ತದೆ  ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಮರು ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಅವುಗಳನ್ನು ಅಲ್ಲಗಳೆದಿರುತ್ತಾರೆ. ಸಾಕ್ಷಿಯು ಅಲ್ಲಗಳೆದ ಭಾಗವನ್ನು ನಿ.ಪಿ. 8 ಎಂದು ಗುರುತಿಸಲಾಯಿತು. ನಂತರ ದಿನಾಂಕ 05.05.2022 ರಂದು ಪೊಲೀಸರು ನನಗೆ ನಿ.ಪಿ. 4 ರಂತೆ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟಿಸಿಗೆ ನಾನು ನಿ.ಪಿ. 5 ರಂತೆ ಉತ್ತರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಉತ್ತರದಲ್ಲಿ ನಾನು ಅಪಘಾತ ದಿನದಂದು ಕೆಎ–51–ಎಂಡಿ–1684 ನೇ ಕಾರನ್ನು ಚಲಾಯಿಸುತ್ತಿದುದಾಗಿ ತಿಳಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ನಿ.ಪಿ. 6 ರಂತೆ ನಷ್ಟ ಭರ್ತಿ ಮುಚ್ಚಳಿಕೆ ಪತ್ರ ಬರೆದು ಕೊಟ್ಟು ವಾಹನವನ್ನು ಬಿಡುಗಡೆಗೊಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಾಡನೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ  ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ